**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ**

**ಸಿ.ಸಿ.ನಂ.23647/2019**

ಫಿರ್ಯಾದಿದಾರರ ಹೆಸರುಃ ರಾಜ್ಯ ಸರ್ಕಾರದ ಪರವಾಗಿ ಪೀಣ್ಯ ಆರಕ್ಷಕ ಠಾಣೆ,
ಬೆಂಗಳೂರು.

ವಿರುದ್ಧ

ಆರೋಪಿತರ ಹೆಸರುಃ
1. ಶ್ರೀ ಗೃಹ ಲಕ್ಷ್ಮಿ ಗೃಹ ನಿರ್ಮಾಣ ಸಹಕಾರ ಸಂಘ
2. ಬಸವರಾಜ್
3. ಪ್ರೇಮ್ ಕುಮಾರ್
4. ನಂಜುಂಡರಾಜೇ ಅರಸ್

**ದೋಷಾರೋಪಣೆ**

ಬೆಂಗಳೂರಿನ 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ಶ್ರೇಯಾಂಶ ದೊಡ್ಡಮನಿ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ದೋಷಾರೋಪಣ ಪಟ್ಟಿಯ ಆರೋಪಿತರಾದ ನೀವು ನಿಮ್ಮ ಸಮಾನ ಉದ್ದೇಶವನ್ನಿಡೇರಿಸಿಕೊಳ್ಳಲು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ನಾಗಸಂದ್ರ ಅಂಚೆ ನೆಲಗದರನಹಳ್ಳಿ ಗ್ರಾಮದ ವಿವಿಧ ಸರ್ವೇ ನಂಬರುಗಳಿಗೆ ಸೇರಿದ ಸುಮಾರು 61 ಎಕರೆ 33 ಗುಂಟೆ ಜಮೀನುಗಳನ್ನು ಸರ್ಕಾರದಿನದ ವಸತಿ ನಿರ್ಮಾಣದ ಉದ್ದೇಶಕ್ಕಾಗಿ ಶ್ರೀ ಗೃಹ ಲಕ್ಷ್ಮಿ ಕೋ ಆಪರೇಟಿವ್ ಹೌಸಿಂಗ್ ಸೋಸೈಟಿಯ ಸ್ವಾಧೀನಕ್ಕೆ ಪಡೆದು ದಿನಾಂಕ 03.10.1992 ರಲ್ಲಿ ಸರ್ಕಾರದ ಕಡೆಯಿಂದ ವ್ಯವಸಾಯೇತರ ಜಮೀನಾಗಿ ಪರಿವರ್ತಿಸಿಕೊಂಡಿದ್ದು, 1954 ನೇ ಸಾಲಿನಲ್ಲಿ ಮುನಿಕಂಬಯ್ಯ ಬಿನ್ ಬೀರಲಿಂಗಯ್ಯನವರು ಸರ್ವೇ ನಂ98/2 ರಲ್ಲಿ 2 ಎಕರೆ ಜಮೀನು ಹೊಂದಿದ್ದು ಇದರಲ್ಲಿ 1 ಎಕರೆ 18 ಗುಂಟೆ ಜಮೀನನ್ನು ಮಾರಾಟ ಮಾಡಿದ್ದು ಉಳಿಕೆ ಜಮೀನಿಗೆ ಸಂಬಂಧಪಟ್ಟಂತೆ ಓ.ಎಸ್.ನಂ.10420/2006 ರಲ್ಲಿ ಮುನಿಕಂಬಯ್ಯ ಹಾಗೂ ಗಂಗಮಾರಯ್ಯರವರ ನಡುವೆ ವ್ಯಾಜ್ಯ ನಡೆಯುತ್ತಿದ್ದು, ಗಂಗಮಾರಯ್ಯರವರಿಗೆ ಸೇರಿದ ಸರ್ವೇ ನಂ.98/2 ಜಮೀನನ್ನು ಗೃಹ ಲಕ್ಷ್ಮಿ ನಿರ್ಮಾಣ ಸಹಕಾರ ಸಂಘದವರು ಖರೀದಿ ಮಾಡದೆಯೇ ಅಧ್ಯಕ್ಷರು, ಪದಾಧಿಕಾರಿಗಳು, ಅನಧಿಕೃತವಾಗಿ ಜಮೀನಿನಲ್ಲಿ ಸೈಟುಗಳನ್ನು ವಿಂಗಡಿಸಿ 1 ನೇ ಆರೋಪಿಯ ಜೊತೆ ಶಾಮೀಲಾಗಿ ಒಳಸಂಚು ಮಾಡಿ ಸರ್ವೇ ನಂಬರ್ 98/2 ರಲ್ಲಿರುವ 540 ಎ ಸೈಟನ್ನು ದಿನಾಂಕ 17.06.2006 ರಲ್ಲಿ ರೂ.40,200/- ಗಳಿಗೆ ಮಾರಾಟ ಮಾಡಿದ್ದು, 1 ನೇ ಆರೋಪಿಯಾದ ನೀವು ಅದೇ ಸೈಟನ್ನು 6 ತಿಂಗಳ ನಂತರ ದಿನಾಂಕ 07.12.2006 ರಂದು 1 ನೇ ಸಾಕ್ಷಿ ಅವರಿಗೆ ರೂ.6,70,000/- ಗಳಿಗೆ ಮಾರಾಟ ಮಾಡಿ ಆ ಮೂಲಕ ಕಲಂ 120-ಬಿ ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ,

ಎರಡನೇಯದಾಗಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮೇಲೆ ಹೇಳಿದಂತೆ ಗಂಗಮಾರಯ್ಯರವರಿಗೆ ಸೇರಿದ ಸರ್ವೆ ನಂ.98/2 ಜಮೀನನ್ನು ಗೃಹ ಲಕ್ಷ್ಮಿ ನಿರ್ಮಾಣ ಸಹಕಾರ ಸಂಘದವರು ಖರೀದಿ ಮಾಡದೆಯೇ ಅಧ್ಯಕ್ಷರು, ಪದಾಧಿಕಾರಿಗಳು, ಅನಧಿಕೃತವಾಗಿ ಜಮೀನಿನಲ್ಲಿ ಸೈಟುಗಳನ್ನು ವಿಂಗಡಿಸಿ 1 ನೇ ಆರೋಪಿಯ ಜೊತೆ ಶಾಮೀಲಾಗಿ ಸರ್ವೆ ನಂಬರ್ 98/2 ರಲ್ಲಿರುವ 540 ಎ ಸೈಟನ್ನು ದಿನಾಂಕ 17.06.2006 ರಲ್ಲಿ ರೂ.40,200/- ಗಳಿಗೆ ಮಾರಾಟ ಮಾಡಿದ್ದು, 1 ನೇ ಆರೋಪಿಯಾದ ನೀವು ಅದೇ ಸೈಟನ್ನು 6 ತಿಂಗಳ ನಂತರ ದಿನಾಂಕ 07.12.2006 ರಂದು 1 ನೇ ಸಾಕ್ಷಿ ಅವರಿಗೆ ರೂ.6,70,000/- ಗಳಿಗೆ ಮಾರಾಟ ಮಾಡಿ ನಂಬಿಕೆದ್ರೋಹವೆಸಗಿ ಆ ಮೂಲಕ ಕಲಂ 406 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ,

ಮೂರನೇಯದಾಗಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮೇಲೆ ಹೇಳಿದಂತೆ ಗಂಗಮಾರಯ್ಯರವರಿಗೆ ಸೇರಿದ ಸರ್ವೆ ನಂ.98/2 ಜಮೀನನ್ನು ಗೃಹ ಲಕ್ಷ್ಮಿ ನಿರ್ಮಾಣ ಸಹಕಾರ ಸಂಘದವರು ಖರೀದಿ ಮಾಡದೆಯೇ ಅಧ್ಯಕ್ಷರು, ಪದಾಧಿಕಾರಿಗಳು, ಅನಧಿಕೃತವಾಗಿ ಜಮೀನಿನಲ್ಲಿ ಸೈಟುಗಳನ್ನು ವಿಂಗಡಿಸಿ 1 ನೇ ಆರೋಪಿಯ ಜೊತೆ ಶಾಮೀಲಾಗಿ ಸರ್ವೆ ನಂಬರ್ 98/2 ರಲ್ಲಿರುವ 540 ಎ ಸೈಟನ್ನು ದಿನಾಂಕ 17.06.2006 ರಲ್ಲಿ ರೂ.40,200/- ಗಳಿಗೆ ಮಾರಾಟ ಮಾಡಿದ್ದು, 1 ನೇ ಆರೋಪಿಯಾದ ನೀವು ಸದರಿ ಸೈಟು ಮಾರಾಟವಾಗಿರುವುದು ಗೊತ್ತಿದ್ದರೂ ಕೂಡ ಮೋಸ ಮಾಡುವ ಉದ್ದೇಶದಿಂದ ಅದೇ ಸೈಟನ್ನು 6 ತಿಂಗಳ ನಂತರ ದಿನಾಂಕ 07.12.2006 ರಂದು 1 ನೇ ಸಾಕ್ಷಿ ಅವರಿಗೆ ರೂ.6,70,000/- ಗಳಿಗೆ ಮಾರಾಟ ಮಾಡಿ ಆ ಮೂಲಕ ಕಲಂ 418 ಸಹವಾಚಕ ಕಲಂ 34 ರಡಿ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ನಾಲ್ಕನೇಯದಾಗಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮೇಲೆ ಹೇಳಿದಂತೆ ಗಂಗಮಾರಯ್ಯರವರಿಗೆ ಸೇರಿದ ಸರ್ವೆ ನಂ.98/2 ಜಮೀನನ್ನು ಗೃಹ ಲಕ್ಷ್ಮಿ ನಿರ್ಮಾಣ ಸಹಕಾರ ಸಂಘದವರು ಖರೀದಿ ಮಾಡದೆಯೇ ಅಧ್ಯಕ್ಷರು, ಪದಾಧಿಕಾರಿಗಳು, ಅನಧಿಕೃತವಾಗಿ ಜಮೀನಿನಲ್ಲಿ ಸೈಟುಗಳನ್ನು ವಿಂಗಡಿಸಿ 1 ನೇ ಆರೋಪಿಯ ಜೊತೆ ಶಾಮೀಲಾಗಿ ಸರ್ವೆ ನಂಬರ್ 98/2 ರಲ್ಲಿರುವ 540 ಎ ಸೈಟನ್ನು ದಿನಾಂಕ 17.06.2006 ರಲ್ಲಿ ರೂ.40,200/- ಗಳಿಗೆ ಮಾರಾಟ ಮಾಡಿದ್ದು, 1 ನೇ ಆರೋಪಿಯಾದ ನೀವು ಮೋಸ ಮಾಡುವ ಉದ್ದೇಶದಿಂದ ಅದೇ ಸೈಟನ್ನು 6 ತಿಂಗಳ ನಂತರ ದಿನಾಂಕ 07.12.2006 ರಂದು 1 ನೇ ಸಾಕ್ಷಿ ಅವರಿಗೆ ರೂ.6,70,000/- ಗಳಿಗೆ ಮಾರಾಟ ಮಾಡಿ ಆ ಮೂಲಕ ಕಲಂ 418 ಮತ್ತು 420 ಸಹವಾಚಕ ಕಲಂ 34 ರಡಿ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಮೇಲೆ ಹೇಳಿದ ದೋಷಾರೋಪಣೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ಪ್ರ:1 ನಿಮ್ಮ ಮೇಲಿನ ಆಪಾದನೆ ತಿಳಿಯಿತೆ ?

ಉ: 2 ನೇ ಆರೋಪಿ:

3 ನೇ ಆರೋಪಿಃ

4 ನೇ ಆರೋಪಿಃ

ಪ್ರಃ2 ನಿಮ್ಮ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ ?

ಉಃ 2 ನೇ ಆರೋಪಿಃ

3 ನೇ ಆರೋಪಿಃ

4 ನೇ ಆರೋಪಿಃ

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿ ಅವರು ನೀಡಿದ ಉತ್ತರವನ್ನು ಬರೆದುಕೊಳ್ಳಲಾಗಿದೆ).

ದಿನಾಂಕಃ06.11.2023. 3 ನೇ ಎ.ಸಿ.ಎಂ.ಎಂ., ನ್ಯಾಯಾಲಯ,

ಬೆಂಗಳೂರು.